**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ.**

**ಸಿ.ಸಿ.ಃ 6/2018**

ಪಿ.ಡಬ್ಲ್ಯೂ **11** **ಸಿ.ಡಬ್ಲ್ಯೂಃ9**

**ಸಾಕ್ಷಿದಾರರ ಹೆಸರು** ಃ ಜಯರಾಮ

**ತಂದೆಯ ಹೆಸರು** ಃ ರಾಮಪ್ಪ ಗೌಡ

**ವಯಸ್ಸು** ಃ **47 ವರ್ಷ**

**ಉದ್ಯೋಗ** ಃ ಖಾಸಗಿ ಉದ್ಯೋಗ

**ವಾಸಸ್ಥಳ** ಃ ಉಡುಪಿ

**ದಿಃ 02.03.2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾ** ಯಿತು.

**ಮುಖ್ಯ ವಿಚಾರಣೆಃ ಮಾನ್ಯ**, ಸರಕಾರಿ ಹಿರಿಯ **ಅಭಿಯೋಜಕರಿಂದಃ**

ದಿಃ**04-01-2013** ರ ಸೊತ್ತು ಸ್ವಾಧೀನತಾ ಮಹಜರನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಮಹಜರನ್ನು ಈಗಾಗಲೀ ನಿಶಾನೆ ಪಿ **9** ಎಂದೂ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿ ಪಿ **9** ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಕೊಡಗಿನ ಕುಶಾಲ ನಗರದಲ್ಲಿ **04-01-2013** ರಂದು ಮಾಡಿರುತ್ತೇನೆ.ದಿಃ **04-01-2013** ರಂದು ಈ ಪ್ರಕರಣದ ಆರೋಪಿಯಾದ ರಾಜೇಶ ಎಂಬವನು ನನ್ನನ್ನು ಮತ್ತು ಪೋಲೀಸರನ್ನು ಬ್ರಹ್ಮಾವರ ಪೋಲೀಸ್ ಠಾಣೆಯಿಂದ ಕೊಡಗಿನ ಕುಶಾಲ ನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಪೆಡರಲ್ ಬ್ಯಾಂಕಿಗೆ ಕರೆದುಕೊಂಡು ಹೋಗಿ ಅಲ್ಲಿಂದ ಆರೋಪಿಯು ಅವರ ಮನೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಆರೋಪಿಯು ಒಂದು ಬ್ಯಾಗನ್ನು ಎರಡು ಮೊಬೈಲನ್ನು ಹಾಗೂ ಒಂದು ಜೊತೆ ಕಿವಿಯ ಓಲೆಯನ್ನು ತೋರಿಸಿಕೊಟ್ಟಿದ್ದು ಅವುಗಳನ್ನು ಪೋಲೀಸರು ಸ್ವಾಧೀನಕ್ಕೆ ಪಡೆದು ನಿಶಾನೆ ಪಿ **9** ರಂತೆ ಮಹಜರನ್ನು ತಯಾರಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಮೇಲೆ ಹೇಳಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸಿ ಸಿ ನಂಬ್ರ **20-17** ರಲ್ಲಿ ಗುರುತಿಸಲಾಗಿರುವ ಮುದ್ದೆ ಮಾಲು **2** ಮತ್ತು **4** ನ್ನು ನೋಡಿ ಗುರುತಿಸಿರುತ್ತಾರೆ. ಮೇಲೆ ಹೇಳಿದ ರಾಜೇಶ ಎಂಬ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷವನ್ನು ಕಲಂ **299** ರ ಅಡಿಯಲ್ಲಿ ದಾಖಲು ಮಾಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾ** ಯಿತು)

**ಓ ಹೇ ಕೇ ಸ ಇದೆ ಎಂದು ಒಪ್ಪಿದರು**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎ.ಸಿ.ಜೆ.ಎಮ್, ಉಡುಪಿ.**